# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | : **ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **699** |
| ಉತ್ತರಿಸಬೇಕಾದ ದಿನಾಂಕ | : 12.03.2025 |
| ಉತ್ತರಿಸಬೇಕಾದ ಸಚಿವರು | : ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರದಿಂದ ಗ್ರಾಮೀಣ ಭಾಗದಲ್ಲಿನ ಬಸವ ವಸತಿ ಯೋಜನೆಯಡಿ 2010-11 ರಿಂದ ಇಲ್ಲಿಯವರೆಗೆ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆಯಡಿ 2015-16 ರಿಂದ ಇಲ್ಲಿಯವರೆಗೆ ಗುರಿಗೆ ಅನುಗುಣವಾಗಿ ಅರ್ಹ ಫಲಾನುಭವಿಗಳು ಮನೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದು, ವಿಜಯಪುರ-ಬಾಗಲಕೋಟೆ ಜಿಲ್ಲೆಯಲ್ಲಿ ತಾಲ್ಲೂಕುವಾರು ಗುರಿಗೆ ಅನುಗುಣವಾಗಿ ಆಯ್ಕೆಗೊಂಡ ಅರ್ಹ ಫಲಾನುಭವಿಗಳ ಸಂಖ್ಯೆ ಎಷ್ಟು; ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುವ ಮನೆಗಳ ಸಂಖ್ಯೆ ಎಷ್ಟು; ಬಿಡುಗಡೆಗೆ ಬಾಕಿ ಇರುವ ಅನುದಾನ ಎಷ್ಟು; (ವಿವರವನ್ನು ಒದಗಿಸುವುದು). | ಬಸವ ವಸತಿ ಯೋಜನೆಯಡಿ 2010-11 ರಿಂದ ಇಲ್ಲಿಯವರೆಗೆ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ, 2015-16 ರಿಂದ ಇಲ್ಲಿಯವರೆಗೆ ಈ ಕೆಳಕಂಡಂತೆ ಮನೆಗಳನ್ನು ಮಂಜೂರು ಮಾಡಿ ಕಾಮಗಾರಿ ಆದೇಶ ನೀಡಲಾಗಿದೆ. ಯೋಜನಾವಾರು ವಿವರ ಕೆಳಕಂಡಂತಿದೆ (see tables below) |

**ವಿಜಯಪುರ ಜಿಲ್ಲೆ:**

| ಯೋಜನೆ | ಮಂಜೂರಾದ ಮನೆಗಳು | ಪೂರ್ಣಗೊಂಡ ಮನೆಗಳು | ಪ್ರಗತಿಯಲ್ಲಿರುವ ಮನೆಗಳು | ಪ್ರಾರಂಭವಾಗದ ಮನೆಗಳು | ತಾತ್ಕಾಲಿಕವಾಗಿ ತಡೆಹಿಡಿಯಲಾದ ಮನೆಗಳು |
|---|---|---|---|---|---|
| ಬಸವ ವಸತಿ | 85418 | 67976 | 8726 | 4853 | 3863 |
| ಡಾ\|\| ಬಿ.ಆರ್ ಅಂಬೇಡ್ಕರ್ ನಿವಾಸ್ (ಗ್ರಾ) | 25024 | 20470 | 2920 | 1051 | 583 |
| ಡಾ\|\| ಬಿ.ಆರ್ ಅಂಬೇಡ್ಕರ್ ನಿವಾಸ್ (ನ) | 6587 | 5123 | 839 | 212 | 413 |
| **ಒಟ್ಟು** | **117029** | **93569** | **12485** | **6116** | **4859** |

**ಬಾಗಲಕೋಟೆ ಜಿಲ್ಲೆ:**

| ಯೋಜನೆ | ಮಂಜೂರಾದ ಮನೆಗಳು | ಪೂರ್ಣಗೊಂಡ ಮನೆಗಳು | ಪ್ರಗತಿಯಲ್ಲಿರುವ ಮನೆಗಳು | ಪ್ರಾರಂಭವಾಗದ ಮನೆಗಳು | ತಾತ್ಕಾಲಿಕವಾಗಿ ತಡೆಹಿಡಿಯಲಾದ ಮನೆಗಳು |
|---|---|---|---|---|---|
| ಬಸವ ವಸತಿ | 65869 | 45029 | 6538 | 873 | 13429 |
| ಡಾ\|\| ಬಿ.ಆರ್ ಅಂಬೇಡ್ಕರ್ ನಿವಾಸ್ (ಗ್ರಾ) | 11197 | 8570 | 1676 | 432 | 519 |
| ಡಾ\|\| ಬಿ.ಆರ್ ಅಂಬೇಡ್ಕರ್ ನಿವಾಸ್ (ನ) | ಡಾ\|\| ಬಿ.ಆರ್ ಅಂಬೇಡ್ಕರ್ ನಿವಾಸ್ (ನ) | 2558 | 467 | 187 | 546 |
| **ಒಟ್ಟು** | **80824** | **56157** | **8681** | **1492** | **14494** |

ಪ್ರಸ್ತುತ ಬಾಗಲಕೋಟೆ ಜಿಲ್ಲೆಗೆ ಬಸವ ವಸತಿ ಯೋಜನೆಯಡಿ ಪ್ರಗತಿಯಲ್ಲಿರುವ ಒಟ್ಟು 1309 ಮನೆಗಳಿಗೆ ರೂ.482.08 ಲಕ್ಷಗಳು ಬಿಡುಗಡೆಗೆ ಬಾಕಿ ಇರುತ್ತದೆ (ತಳಪಾಯ ಹಂತದ 138 ಮನೆಗಳಿಗೆ ರೂ.48.85 ಲಕ್ಷಗಳು, ಗೋಡೆ ಹಂತದ 183 ಮನೆಗಳಿಗೆ ರೂ.94.55 ಲಕ್ಷಗಳು ಮತ್ತು ಪೂರ್ಣ ಹಂತದ 988 ಮನೆಗಳಿಗೆ ರೂ.338.68 ಲಕ್ಷಗಳು)

ವಿಜಯಪುರ ಜಿಲ್ಲೆಗೆ ಬಸವ ವಸತಿ ಯೋಜನೆಯಡಿ ಪ್ರಗತಿಯಲ್ಲಿರುವ ಒಟ್ಟು 5185 ಮನೆಗಳಿಗೆ ರೂ.2070.59 ಲಕ್ಷಗಳು ಬಿಡುಗಡೆಗೆ ಬಾಕಿ ಇರುತ್ತದೆ (ತಳಪಾಯ ಹಂತದ 1075 ಮನೆಗಳಿಗೆ ರೂ.380.42 ಲಕ್ಷಗಳು, ಗೋಡೆ ಹಂತದ 1518 ಮನೆಗಳಿಗೆ ರೂ.779.34 ಲಕ್ಷಗಳು ಮತ್ತು ಪೂರ್ಣಗೊಂಡ ಹಂತದ 2592 ಮನೆಗಳಿಗೆ ರೂ.910.83 ಲಕ್ಷಗಳು).

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಸದರಿ ಯೋಜನೆಯಲ್ಲಿ ಅರ್ಹ ಫಲಾನುಭವಿಗಳಿಗೆ ವಿವಿಧ ಹಂತಗಳಲ್ಲಿ ಮನೆ ನಿರ್ಮಾಣಗೊಂಡರೂ ನಿಗಧಿತ ಅವಧಿಯಲ್ಲಿ ಸಹಾಯಧನ ಬಿಡುಗಡೆಯಾಗದೇ ಫಲಾನುಭವಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿವಿಧ ವಸತಿ ಯೋಜನೆಗಳಡಿ ಅನುಮೋದನೆಗೊಂಡು ನಿರ್ಮಾಣ ಹಂತದಲ್ಲಿರುವ ಮನೆಗಳ ಅರ್ಹ ಫಲಾನುಭವಿಗಳ ಜಿಪಿಎಸ್ ಭೌತಿಕ ಪ್ರಗತಿಗನುಗುಣವಾಗಿ ಆಧಾರ್ ಜೋಡಣೆಗೊಂಡ ಫಲಾನುಭವಿಗಳ ಬ್ಯಾಂಕ್ ಖಾತೆಗಗಳಿಗೆ ನೇರವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.<br><br>ಪ್ರಸ್ತುತ ಬಸವ ವಸತಿ ಯೋಜನೆಯನ್ನು ಹೊರತುಪಡಿಸಿ ಉಳಿದಂತೆ ಯಾವುದೇ ವಸತಿ ಯೋಜನೆಗಳಡಿ ಅರ್ಹ ಫಲಾನುಭವಿಗಳಿಗೆ ಅನುದಾನ ಬಿಡುಗಡೆಗೆ ಬಾಕಿ ಇರುವುದಿಲ್ಲ.<br><br>2024-25ನೇ ಸಾಲಿನ ಆಯವ್ಯಯದಲ್ಲಿ ಬಸವ ವಸತಿ ಯೋಜನೆಗಾಗಿ ರೂ.400.00 ಕೋಟಿಗಳು ಅನುದಾನವನ್ನು ಒದಗಿಸಿ ನಿಗಮಕ್ಕೆ ಬಿಡುಗಡೆ ಮಾಡಲಾಗಿದೆ. ಈ ಅನುದಾನವನ್ನು ಸಂಪೂರ್ಣವಾಗಿ ಖರ್ಚು ಮಾಡಲಾಗಿದ್ದು, ಹೆಚ್ಚುವರಿಯಾಗಿ ರೂ. 400.00ಕೋಟಿ ಅನುದಾನವನ್ನು ಒದಗಿಸುವಂತೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಹೆಚ್ಚುವರಿ ಅನುದಾನವು ಬಿಡುಗಡೆಯಾದ ನಂತರ ಬಾಕಿ ಬಿಡುಗಡೆಗೆ ಕ್ರಮವಹಿಸಲಾಗುವುದು: |

| | | |
|---|---|---|
| ಇ) | 2021-22ನೇ ಸಾಲಿನ ವಸತಿ ಯೋಜನೆಗಳಲ್ಲಿ ಗ್ರಾಮೀಣ ಭಾಗದಲ್ಲಿ ಆಯ್ಕೆಗೊಂಡ ಅರ್ಹ ಫಲಾನುಭವಿಗಳು ವಿವಿಧ ಕಾರಣಗಳಿಂದ ನಿಗಧಿತ ಅವಧಿಯಲ್ಲಿ ಮನೆಗಳನ್ನು ಪ್ರಾರಂಭಿಸದೇ ಇರುವುದರಿಂದ RGRHCL ಬ್ಲಾಕ್ ಮಾಡಿದ್ದು, ಅಂತಹ ಫಲಾನುಭವಿಗಳ ಮನೆಗಳ ನಿರ್ಮಾಣಕ್ಕೆ ಸರ್ಕಾರವು ಕಾಲಾವಕಾಶ ನೀಡಲು ಕ್ರಮ ಕೈಗೊಳ್ಳುವುದೇ? (ಮಾಹಿತಿ ನೀಡುವುದು) | 2021-22ನೇ ಸಾಲಿನಲ್ಲಿ ಮಂಜೂರಾದ ಮನೆಗಳ ಫಲಾನುಭವಿಗಳು ಕಾಮಗಾರಿ ಆದೇಶ ನೀಡಿ ಗರಿಷ್ಟ 2 ವರ್ಷ ನಂತರವೂ ಸಹ ಮನೆಗಳು ಪ್ರಾರಂಭವಾಗದ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ ವಇ 179 ಹೆಚ್‌ಎಹೆಚ್ 2024, ದಿನಾಂಕ: 29.10.2024ರಲ್ಲಿ 35645 ಮನೆಗಳನ್ನು ರದ್ದುಪಡಿಸಿ, ಹಿಂಪಡೆದು ಅವಶ್ಯಕತೆ ಇರುವ ವಿವಿಧ ತಾಲ್ಲೂಕುಗಳಿಗೆ ಹೆಚ್ಚುವರಿ ಗುರಿಯನ್ನು ಮಂಜೂರು ಮಾಡಲಾಗಿರುತ್ತದೆ. |

ಸಂಖ್ಯೆ: ವಇ 99 ಹೆಚ್‌ಎಎಂ 2025

**(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)**
ವಸತಿ, ವಕ್ಪ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು